**ಸಾಕ್ಷಿಯನ್ನು ದಿಃ 02.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದ**

ನಾನು ಈ ದಾವೆಯಲ್ಲಿ ಮೈನರ್ ವಾದಿಯ ತಾಯಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ, ಸತ್ಯವಾಗಿದೆ ಮತ್ತು ಸಹಿ ನನ್ನದೆ ಆಗಿದೆ.

**ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ.**

| | |
|---|---|
| ನಿಪಿ.1 **ರಿಂದ** 2 | ಸರ್ವೆ ನಂ. 85 ರ 2 ಆರ್.ಟಿ.ಸಿಗಳು |
| ನಿಪಿ.3 | ಸರ್ವೆ ನಂ. 46/1 ರ 1 ಆರ್.ಟಿ.ಸಿ |
| ನಿಪಿ.4 ರಿಂದ 7 | 4 ಮ್ಯೂಟೇಶನ್ ರಿಜಿಸ್ಟರ್ ಪ್ರತಿಗಳು |
| ನಿಪಿ.8 | ವಾದಿ ಸೋನಾಕ್ಷಿಯ ಶಾಲಾ ದೃಡೀಕರಣ ಪತ್ರ |
| ನಿಪಿ.9 ರಿಂದ 13 | ನನ್ನ ಮತ್ತು ಗಂಡ ಸೋಮಶೇಖರ ರವರ ಮದುವೆಯ 3 ಪೋಟೊಗಳು, ಜಂಟಿಯ 2 ಪೋಟೊಗಳು,65 ಬಿ. ಪ್ರಮಾಣ ಪತ್ರದ ಜೊತೆಗೆ ಸಿಡಿ ಹಾಜರು ಪಡಿಸುವ ಮೇರೆಗೆ ಗುರುತಿಸಲಾಯಿತು. |
| ನಿಪಿ.14 | ವಾದಿ ಸೋನಾಕ್ಷಿಯ ಆಧಾರ್ ಕಾರ್ಡ |
| ನಿಪಿ.15 | ವಾದಿ ತಾಯಿ ವಿಶಾಲಾಕ್ಷಿ ರವರ ಆಧಾರ್ ಕಾರ್ಡ |
| ನಿಪಿ.16 | ಗಂಡ ಸೋಮಶೇಖರ ರವರ ಮರಣ ಪ್ರಮಾಣ ಪತ್ರ |

**ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.